## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.394/2020

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ಕಿರಣ್ ಕುಮಾರ್. ಎಂ | CW: 1 | PW: 1 |
| ತಂದೆಯ ಹೆಸರು | : | ಗದುಗಯ್ಯ | | |
| ವಯಸ್ಸು | : | 31 | | |
| ವೃತ್ತಿ | : | ಖಾಸಗಿ ಕೆಲಸ | | |
| ವಾಸಸ್ಥಳ | : | ಶಿಕಾರಿಪುರ ತಾಲ್ಲೂಕು | | |

ದಿನಾಂಕಃ 11.09.2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ – ಮಾನ್ಯ ಸ.ಸ.ಅ.ರವರಿಂದಃ–

ಆರೋಪಿ ಮತ್ತು ಮೃತ ನಾಗೇಂದ್ರಪ್ಪ ಗೊತ್ತು. ಚಾಸಾ 7 ರಿಂದ 9 ಮತ್ತು 11 ರವರು ಗೊತ್ತಿಲ್ಲ. ಚಾಸಾ 10 ರವರು ಗೊತ್ತು. ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿಲ್ಲ, ನಾನು ಯಾವುದೇ ಅಪಘಾತವನ್ನು ನೋಡಿಲ್ಲ. ಅಪಘಾತದ ಸಂಬಂಧ ಯಾವುದೇ ದೂರು ನೀಡಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿಲ್ಲ. ಯಾವುದೇ ವಾಹನಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ.

ಪೋಲೀಸರ ಕೋರಿಕೆಯ ಮೇರೆಗೆ ಕೆಲವು ದಾಖಲೆಗಳಿಗೆ ನಾನು ಸಹಿಯನ್ನು ಮಾಡಿರುತ್ತೇನೆ ಆದರೆ ಅದರಲ್ಲಿ ಏನು ಬರೆದಿದೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ಸಾಕ್ಷಿಯು 5 ಛಾಯಾಚಿತ್ರಗಳಲ್ಲಿ ತಾನು ಇರುವ ಬಗ್ಗೆ ನೋಡಿ ಗುರುತಿಸಿದ್ದು ಅದನ್ನು ಯಾವ ಕಾರಣಕ್ಕೆ ತೆಗೆದಿರುತ್ತಾರೆ ಎಂದು ಗೊತ್ತಿಲ್ಲ.

ಸಾಕ್ಷಿಯು ದೂರಿನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ಥಳ ಪಂಚನಾಮೆ ಮತ್ತು ಕಚ್ಚಾ ನಕಾಶೆಯಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಸ್ಥಳ ಪಂಚನಾಮೆ ಮತ್ತು ಕಚ್ಚಾ ನಕಾಶೆಗಳನ್ನು ನಿಪಿ 2 ಮತ್ತು 3 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ 2(ಎ) ಮತ್ತು 3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ಥಳ ಪಂಚನಾಮೆ ಸಂದರ್ಭ ತೆಗೆದ 3 ಪೋಟೋಗಳಲ್ಲಿ ತಾನು ಇರುವುದನ್ನು ನೋಡಿ

ಗುರುತಿಸಿದ್ದು ಫೋಟೋಗಳನ್ನು ನಿಪಿ 4 ರಿಂದ 6 ಎಂದು ಗುರುತಿಸಲಾಯಿತು. ವಾಹನ ಪಂಚನಾಮೆಯಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ವಾಹನ ಪಂಚನಾಮೆಯನ್ನು ನಿಪಿ 7 ಎಂದು, ಸಾಕ್ಷಿಯ ಸಹಿಯನ್ನು ನಿಪಿ 7(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ವಾಹನ ಪಂಚನಾಮೆ ಸಂದರ್ಭ ತೆಗೆದ 2 ಫೋಟೋಗಳಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿದ್ದು ಫೋಟೋಗಳನ್ನು ನಿಪಿ 8 ಮತ್ತು 9 ಎಂದು ಗುರುತಿಸಲಾಯಿತು. ಫೋಟೋಗಳಿಗೆ ಸಂಬಂಧಿಸಿದ ಸಿಡಿಯನ್ನು ನಿಪಿ 10 ಎಂದು ಗುರುತಿಸಲಾಯಿತು.

(ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.)

<u>ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-</u>

ದಿಃ 10.11.2019 ರಂದು ನಾನು ಹಾಗೂ ಚಾಸಾ 10 ರವರು ಕೆಎ 15 ಎ 3528 ನಂಬರ್ ನ ಗಜಾನನ ಬಸ್ ನಲ್ಲಿ ನಾನು ಬಸ್ ಕಂಡಕ್ಟರ್ ಆಗಿದ್ದು ಆ ದಿನ ಮೇಲ್ಕಂಡ ಬಸ್ ನಲ್ಲಿ ಮೇಲ್ಕಂಡ ಬಸ್ ನ ನಂಬರ್ ನಲ್ಲಿ ಸಿದ್ದಾಪುರ ದಿಂದ ಶಿವಮೊಗ್ಗಕ್ಕೆ ಹೇಗಲು ಶಿಕಾರಿಪುರ ಸವಳಂಗ ಮಾರ್ಗವಾಗಿ ಬೆಳಗ್ಗೆ 11.55 ಗಂಟೆಗೆ ಸವಳಂಗ ಬಸ್ ನಿಲ್ದಾಣಕ್ಕೆ ಬರುತ್ತಿರುವಾಗ ಸವಳಂಗ ಗ್ರಾಮದ ಸರ್ಕಾರಿ ಆಸ್ಪತ್ರೆಯ ಸಮೀಪ ಸವಳಂಗ ಶಿಕಾರಿಪುರದ ರಸ್ತೆಯಲ್ಲಿ ನಮ್ಮ ಬಸ್ ಗಜಾನನ ಕಂಪನಿಯ ಬಸ್ ಅಧಿಕಾರಿಯಾದ ನಾಗೇಂದ್ರಪ್ಪ ರವರು ನಮ್ಮ ಬಸ್ ನ್ನು ಚೆಕ್ ಮಾಡಲು ಬಸ್ ನ್ನು ನಿಲ್ಲಿಸಲು ಸೂಚಿಸಿದ್ದರಿಂದ ಚಾಸಾ 10 ರವರು ಬಸ್ ನ್ನು ನಿಲ್ಲಿಸಿದ್ದು ಆ ಸಮಯಕ್ಕೆ ನಾಗೇಂದ್ರಪ್ಪ ರವರು ಬಸ್ ನ್ನು ಹತ್ತಲು ಬರುತ್ತಿರುವಾಗ ಅದೇ ವೇಳೆಗೆ ಶಿಕಾರಿಪುರ ಕಡೆಯಿಂದ ಸವಳಂಗ ಕಡೆಗೆ ಸಾಯಿ ಮಂಜೂನಾಥ ಬಸ್ ಚಾಲಕನು ತನ್ನ ಬಸ್ ನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನಮ್ಮ ಬಸ್ಸಿಗೆ ಹತ್ತಲು ಬರುತ್ತಿದ್ದ ನಾಗೇಂದ್ರಪ್ಪರವರಿಗೆ ಡಿಕ್ಕಿಪಡಿಸಿ ಅಪಘಾತ ಉಂಟು ಮಾಡಿದರು ಎಂದರೆ ಸರಿಯಲ್ಲ. ನಂತರ ನಾನು ಹಾಗೂ ಚಾಸಾ 10 ರವರು ಹಾಗೂ ಅಲ್ಲಿಯೇ ಇದ್ದ ಸ್ಥಳೀಯರು ಸೇರಿ ನಾಗೇಂದ್ರಪ್ಪರವರನ್ನು ನೋಡಿದಾಗ ಅವರ ತಲೆಗೆ ಪೆಟ್ಟು ರಕ್ತಗಾಯಗಳಾಗಿದ್ದವು ಎಂದರೆ ಸರಿಯಲ್ಲ. ಅಪಘಾತಪಡಿಸಿದ ಬಸ್ ನಂಬರ್ ಕೆಎ 15 6864 ಎಂದರೆ ಸರಿಯಲ್ಲ. ನಂತರ ಯಾವುದೇ ಒಂದು ಆಟೋದಲ್ಲಿ ನಾವುಗಳು ನಾಗೇಂದ್ರಪ್ಪ ರವರನ್ನು ನ್ಯಾಮತಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಗೆ ದಾಖಲು ಮಾಡಿರುತ್ತೇವೆ ಎಂದರೇ ಸರಿಯಲ್ಲ. ನಂತರ ವೈದ್ಯರ ಸಲಹೆಯ ಮೇರೆಗೆ ನಾಗೇಂದ್ರಪ್ಪ ರವರನ್ನು ಶಿವಮೊಗ್ಗದ ಮೆಟ್ರೋ ಆಸ್ಪತ್ರೆಗೆ ದಾಖಲಿಸಿದೆವು ಎಂದರ ಸರಿಯಲ್ಲ. ಅದೇ ದಿನ ನಾಗೇಂದ್ರಪ್ಪರವರಿಗೆ ಚಿಕಿತ್ಸೆ ಫಲಕಾರಿಯಾಗದೇ ಮಧ್ಯಾಹ್ನ 3.15 ಕ್ಕೆ ಮೃತಪಟ್ಟಿರುತ್ತಾರೆ ಎಂದು ತಿಳಿಸಿದರು ಎಂದರೆ ಸರಿಯಲ್ಲ. ಈ ಸಂಬಂಧ ನಾನು ಪೊಲೀಸರಿಗೆ ನಿಪಿ 1 ರಂತೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

ದಿಃ 11.11.2019 ರಂದು ನಾನು ಸ್ಥಳ ತೋರಿಸಿದ ಮೇರೆಗೆ ಪೋಲೀಸರು ನನ್ನ ಹಾಗೂ ಚಾಸಾ 7 ರಿಂದ 9 ರವರ ಸಮಕ್ಷಮದಲ್ಲಿ ನಿಪಿ 2 ರಂತೆ ಮಧ್ಯಾಹ್ನ 3.30 ರಿಂದ 4.30 ರವೆರೆಗೆ ಮಹಜರ್ ಕ್ರಮ ಜರುಗಿಸಿ , ನಿಪಿ 3 ರಂತೆ ಕಚ್ಚಾ ನಕಾಶೆ ತಯಾರಿಸಿ , ನಿಪಿ 4 ರಿಂದ 6 ರಂತೆ ಪೋಟೊ ತೆಗೆದರು ಎಂದರೆ ಸರಿಯಲ್ಲ. ಅದೇ ದಿನ ಸವಳಂಗ ಪೋಲೀಸ್ ಉಪಠಾಣಾ ಆವರಣದಲ್ಲಿ , ನನ್ನ , ಚಾಸಾ 7 ರಿಂದ 9 ರವರ ಸಮಕ್ಷಮ ಸಂಜೆ 5 ರಿಂದ 6 ರ ಸಮಯದಲ್ಲಿ ನಿಪಿ 7 ರಂತೆ ವಾಹನ ಪಂಚನಾಮೆ ಜರುಗಿಸಿ , ನಿಪಿ 8 ಮತ್ತು 9 ರಂತೆ ಪೋಟೋಗಳನ್ನು ತೆಗೆದು ಕೆಎ 15 6864 ನಂಬರ್ ನ ಬಸ್ ನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೇ ಸರಿಯಲ್ಲ. ಈ ಸಂಬಂಧ ಪೋಲೀಸರಿಗೆ ಆರೋಪಿಯ ಹೆಸರು ಶಿವಲಿಂಗ ಮತ್ತೆ ನೋಡಿದರೆ ಗುರುತಿಸುತ್ತೇನೆ ಎಂದು ಮರುಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಒಪ್ಪದ ಮರುಹೇಳಿಕೆಯನ್ನು ನಿಪಿ 11 ಎಂದು ಗುರುತಿಸಲಾಯಿತು.

ಎಲ್ಲಾ ವಿಚಾರಗಳು ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯಹೇಳುತ್ತಿದ್ದೇನೆಂದರೆ ಸರಿಯಲ್ಲ.

<u>ಪಾಟೀ ಸವಾಲುಃ- ಆರೋಪಿ ಪರ ವಕೀಲರಿಂದಃ-</u>

ಆರೋಪಿ ಪರ ವಕೀಲರು ಪಾಟೀ ಸವಾಲು ಏನು ಇಲ್ಲ ಎಂದು ತಿಳಿಸಿದ ಮೇರೆಗೆ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.